**ಕೃಷ್ಣ ಮೇಲ್ದಂಡೆ ಯೋಜನೆಯ ಬಗ್ಗೆ ಅಂದಾಜು ಸಮಿತಿ ವರದಿ ನೀಡಿರುವುದರ ಬಗ್ಗೆ ಚರ್ಚೆ :**

+ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದವರು) : ನಾನು ಹೇಳುವುದೇನೆಂದರೆ, ವೈಜನಾಥ ಪಾಟೀಲ್‌ರವರು ಅಂದಾಜು ಸಮಿತಿಯ ವರದಿ ಕೊಟ್ಟಿದ್ದಾರೆ. ಅದು ಆದಮೇಲೆ ನಾಗೇಗೌಡರು ಕೂಡ ಹೊರಗಡೆ ಅದರ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದಾರೆ. ನಿನ್ನೆ ಮಾನ್ಯ ಹಿರಿಯರಾದ ನಂಜೇಗೌಡರು ಕೂಡ ಕೆಲಸ ನಿಂತಿರುವ ಬಗ್ಗೆ ಅವರೂ ಸಹ ಪ್ರಸ್ತಾಪ ಮಾಡಿದ್ದಾರೆ. ಆದರೆ ಅಂದಾಜು ಸಮಿತಿಯ ಏನು ಕೆಲವು ಶಿಫಾರಸುಗಳು ಇವೆ ಅವುಗಳಲ್ಲಿ ಕೆಲವು ಒಪ್ಪಬಹುದು ಕೆಲವು ಒಪ್ಪದಿರಬಹುದು. ಆದರೆ ಜನರಿಗೆ ಗೊತ್ತಾಗಬೇಕು ಅಂದಾಜು ಸಮಿತಿ ಸಾವಿರಾರು ಕೋಟಿ ರೂಪಾಯಿ ಕೆಲಸ ನಡೆಸುವಂತಹ ಸ್ಥಳದಲ್ಲಿ ಯಾವರೀತಿಯಾಗಿ ಇವತ್ತು ಕೆಲಸ ನಡೆದಿದೆ ಅಥವಾ ಏನು ಅವ್ಯವಹಾರವಾಗಿದೆ ಅದನ್ನು ಸಿಬಿಐ ತನಿಖೆಗೆ ಕೊಡತಕ್ಕ ಕೆಲಸವನ್ನು ಯಾವರೀತಿ ಸರ್ಕಾರ ಮಾಡುತ್ತದೆ? ಇದೇ ಒಂದು ನೆಪದಲ್ಲಿ ಕೆಲಸ ಕೂಡ ನಿಲ್ಲಿಸತಕ್ಕದ್ದು ನಡೆದಿದೆ. ನೀವು ಪದೇ ಪದೇ ಎತ್ತುತ್ತೀರಿ, ಅವರ ಮೇಲೆ ಪದೇ ಪದೇ ಪ್ರಶ್ನೆ ಕೇಳುತ್ತಿದ್ದೀರಿ ಅದಕ್ಕಾಗಿ ನಾವು ಎಲ್ಲ ಕೆಲಸ ನಿಲ್ಲಿಸಿದ್ದೇವೆ ಆಲಮಟ್ಟಿಯದು ಆಗಲಿ, ನಾರಾಯಣಪುರ ಬಲದಂಡೆಯದು ಆಗಲಿ, ಇಂಡಿ ಕೆನಾಲ್‌ದು ಆಗಲಿ, ಜೇವರ್ಗಿ ಬ್ರಾಂಡ್ ಕೆನಾಲ್‌ದು ಆಗಲಿ ಇವೆಲ್ಲ ಕೂಡ ಎನ್‌ಕ್ವೈರಿಯಲ್ಲಿದೆ. ಇದರ ಬಗ್ಗೆ ಡೀಟೈಲ್ ಎಸ್ಟಿಮೇಟ್ ಆಗಬೇಕು ಅದಕ್ಕಾಗಿ ನಾವು ಕೆಲಸ ನಿಲ್ಲಿಸಿದ್ದೇವೆ ಎನ್ನತಕ್ಕ ಮಾತನ್ನು ಇವತ್ತು ಹೇಳುತ್ತಿದ್ದಾರೆ.

ಶ್ರೀ ಕೆ.ಎನ್. ನಾಗೇಗೌಡ : ಅಧ್ಯಕ್ಷರೇ I am on a point of order on the adjournment motion. ತಾವು ಕೊಟ್ಟಿರತಕ್ಕ ನಿಲುವಳಿ ಸೂಚನೆಯಲ್ಲಿ ಎರಡು ಭಾಗ ಇದೆ. ಒಂದು ಭಾಗ ಅಂದಾಜು ಸಮಿತಿ ಕೊಟ್ಟಿರತಕ್ಕ ವರದಿ ಮೇಲೆ ಕ್ರಮ ತೆಗೆದುಕೊಳ್ಳಬೇಕು ಎನ್ನತಕ್ಕದ್ದು. ಎರಡನೆಯ ಪ್ಯಾರಾ, ಡ್ಯಾಮ್ ಮತ್ತು ಕೆನಾಲ್ ಪ್ರೋಗ್ರೆಸ್ ಬಗ್ಗೆ ಕೇಳಿರತಕ್ಕದ್ದು. ಒಂದನೆಯದು ಸಮಿತಿಯ ರಿಪೋರ್ಟ್ ಬಗ್ಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ಅದು ನಿಯಮಾವಳಿ ಪ್ರಕಾರ ಬರುವುದಿಲ್ಲ. ಶೆದ್ದರ್ ಅಂಡ್ ಕಾಲ್‌ನ ಪಾರ್ಲಿಮೆಂಟರಿ ಪ್ರೊಸೀಜರ್ ತಮಗೆ ಗೊತ್ತಿದೆ. ಆದರೂ ಸಹ ಒಂದು ನಿಮಿಷ ಹೇಳುತ್ತೇನೆ. ಹೆಚ್ಚಿಗೆ ಸಮಯ ತೆಗೆದುಕೊಂಡು ತಮ್ಮ ಸಮಯ ಹಾಳು ಮಾಡುವುದಕ್ಕೆ ನಾನು ಹೋಗುವುದಿಲ್ಲ. ಇಲ್ಲಿ ಚರ್ಚೆ ಮಾಡುವುದುಕ್ಕೆ ಬರುವುದಿಲ್ಲ, ಅದಕ್ಕೆ ತಾವು ಅವಕಾಶ ಕೊಡಬಾರದು ಎನ್ನುವುದು ನನ್ನ ಕ್ರಿಯಾಲೋಪ. ಎರಡನೆಯದು ಬಹಳ ಸಲ ನಾರಾಯಣಪುರ, ಆಲಮಟ್ಟಿ ಡಿಫರೆಂಟ್ ಕೆನಾಲ್‌ಗಳ ಬಗ್ಗೆ ಇದೇ ಸದನದಲ್ಲಿ ಮೂರ್ನಾಲ್ಕು ಸಾರಿ ಚರ್ಚೆ ಮಾಡಿದ್ದೇವೆ. ಒಂದು ಅಧಿವೇಶನದಲ್ಲಿ ಒಂದು ವಿಷಯವನ್ನು ಎರಡು ಮೂರು ಸಾರಿ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ನಿನ್ನೆ ಸಹ ಇದೇ ಸದನದಲ್ಲಿ ಚರ್ಚೆ ಮಾಡಿದ್ದೇವೆ. ಪದೇ ಪದೇ ಚರ್ಚೆ ಮಾಡುವುದಕ್ಕೆ ನಿಲುವಳಿ ಸೂಚನೆಯಲ್ಲಿ ಅದು ಬರವುದಿಲ್ಲ ಇದನ್ನು ತಾವು ಅಲೋ ಮಾಡಬಾರದೆಂದು ತಮ್ಮಲ್ಲಿ ಮನವಿ ಮಾಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ನಾಗೇಗೌಡರು ವಿಧಾನ ಪರಿಷತ್ತಿನಲ್ಲಿ ಕೆಲಸ ಮಾಡಿದ್ದಾರೆ. ಅವರದು ಕಡತ ತರಿಸುವುದು ಒಳ್ಳೆಯದು. ಸದನ ಸಮಿತಿ ವರದಿಯ ಮೇಲೆ ಈ ರೀತಿಯಾಗಿ ಚರ್ಚೆಗಳನ್ನು ಮಾಡುವುದಕ್ಕೆ ಅವರು ಪ್ರಯತ್ನಪಟ್ಟಿದ್ದಾರೆ, ಚರ್ಚೆ ಮಾಡಿದ್ದರು ಈಗ ನಾವು ಮಾಡುವುದು ತಪ್ಪೇ?

ಶ್ರೀ ಕೆ.ಎನ್. ನಾಗೇಗೌಡ : ತರಿಸಬಹುದು. ಮಾನ್ಯ ಕಾಗೋಡುತಿಮ್ಮಪ್ಪನವರು ಬಹಳ ಹಿರಿಯ ಸದಸ್ಯರು ಇದ್ದಾರೆ. ನಿಮಗೂ ಚೆನ್ನಾಗಿ ಗೊತ್ತಿದೆ. ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಡ್ಯೂಟಿ ಏನು? ಅಂದಾಜು ಸಮಿತಿಯ ಡ್ಯೂಟಿ ಏನು ಅದು ತಮಗೆ ಗೊತ್ತಿದೆ. ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ವರದಿಯನ್ನು ಚರ್ಚೆ ಮಾಡುವುದಕ್ಕೆ ತಮ್ಮ ಪರ್ಮಿಷನ್ ತೆಗೆದುಕೊಂಡು ತಾವು ಅವಕಾಶವನ್ನು ಯಾವರೀತಿ ಕೊಡುತ್ತೀರಿ ಅದರ ಆಧಾರದ ಮೇಲೆ ಮಾಡತಕ್ಕದ್ದು ಇದೆ. ಅಂದಾಜು ಸಮಿತಿ ವರದಿ ಚರ್ಚೆಯನ್ನು ವಿಧಾನಸಭೆ ಮತ್ತು ವಿಧಾನಪರಿಷತ್ತಿನಲ್ಲಿ ಮಾಡಬಹುದು ಎನ್ನುವುದಿದ್ದರೆ ತಾವು ಅವಕಾಶ ಕೊಡಿ ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಆದರೆ ಶೆಕ್ದರ್ ಅಂಡ್ ಕೌಲ್ ಪಾರ್ಲಿಮೆಂಟರಿ ಪ್ರೋಸೀಜರ್ ಪ್ರಕಾರ ಮಾಡಬೇಕು. ಅದನ್ನು ತಾವು ಇಲ್ಲಿ ಎಷ್ಟೋ ಸಲ ಓದಿದ್ದೀರಿ. ನಾನು ಹೆಚ್ಚಿಗೆ ಹೇಳುವುದಿಲ್ಲ. ಆದ್ದರಿಂದ ಈಗ ಚರ್ಚೆ ಮಾಡಲಿಕ್ಕೆ ಅವಕಾಶ ಕೊಡತಕ್ಕದ್ದು ಸೂಕ್ತವಲ್ಲ. ಅಂದಾಜು ಸಮಿತಿ ವರದಿಯನ್ನು ಚರ್ಚೆ ಮಾಡಲಿಕ್ಕೆ ಆರು ತಿಂಗಳು ಟೈಮ್ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆರು ತಿಂಗಳಿನಲ್ಲಿಯೇ ಮಾಡಿ. ಕೃಷ್ಣಾ ಮೇಲ್ದಂಡೆ ಯೋಜನೆಯ ಬಗ್ಗೆ ಅಂದಾಜು ಸಮಿತಿ ಕೊಟ್ಟಿರುವ ವರದಿಯಲ್ಲಿ....

ಅಧ್ಯಕ್ಷರು : ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುವುದಕ್ಕೆ ಮೊದಲೇ ನಾನು ತಮಗೆ ಹೇಳಿದ್ದೇನೆ. ಸ್ವಲ್ಪ ಬಿಸಿನೆಸ್ ಇದೆ. ಮೋಷನ್ ಮೂವ್ ಮಾಡುವುದು ಇದೆ. ಎಲೆಕ್ಷನ್ ಪ್ರಪೋಸಲ್ಸ್ ಇದೆ ಅವೆಲ್ಲ ಮುಗಿಸೋಣ ಎಂದು ಹೇಳಿದ್ದೇನೆ. We will take up for discussion even earlier, not by taking adjourment motion. ಪಾಯಿಂಟ್ ಆಫ್ ಆರ್ಡರ್ ರೈಸ್ ಮಾಡುವುದಕ್ಕೆ ಮೊದಲೇ ನಾನು ಈ ಮಾತನ್ನು ಹೇಳಿದ್ದೇನೆ. ಬೇರೆ ಬಿಸಿನೆಸ್ ಮುಗಿಸೋಣ ಎಂದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಟೈಮ್ ನಿಗದಿ ಮಾಡುತ್ತೇನೆಂದರೆ ನಮ್ಮದೇನು ಅಭ್ಯಂತರ ಇಲ್ಲ.

ಅಧ್ಯಕ್ಷರು : ಇವತ್ತು ಏನೂ ಹೆಚ್ಚಿಗೆ ಬಿಸಿನೆಸ್ ಇಲ್ಲ. ಇವತ್ತೇ ತೆಗೆದುಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಗೈರು ಹಾಜರಿಯ ಬಗ್ಗೆ ತಾವೇನು ಹೇಳಲಿಲ್ಲ. ತಾವು ಸದನದ ಅಧ್ಯಕ್ಷರಾಗಿದ್ದೀರಿ. ತಾವು ತಮ್ಮ ಅಭಿಪ್ರಾಯ ಹೇಳಬೇಕು. ಈ ತರಹ ಆದರೆ ಏನು ಎನ್ನುವ ಬಗ್ಗೆ ಹೇಳಬೇಕು. ಇದು ಗೌಪ್ಯವಾಗಿ ಉಳಿಯಬಾರದು.

ಅಧ್ಯಕ್ಷರು : ಮಾತು ಬೆಳ್ಳಿ, ಮೌನ ಬಂಗಾರ. We convey more meaning. ಅಂದರೆ ತಾವು ತಮ್ಮ ಆತಂಕವನ್ನು ವ್ಯಕ್ತಪಡಿಸಿದ್ದೀರಿ ಅದು ಮೌನ. ವಿಷಯದ ಗಂಭೀರತೆಯ ಬಗ್ಗೆ ನಿಮ್ಮ ಮನಸ್ಸಿನಲ್ಲಿರತಕ್ಕ ಭಾವನೆಗಳನ್ನು ನೀವು ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸದೆ ಕುಳಿತಿರುವುದರಿಂದ

ಹೆಚ್ಚು ಪರಿಣಾಮಕಾರಿಯಾಗಿ ಅದನ್ನು ಅವರಿಗೆ ತಿಳಿಸಿರುತ್ತೇವೆ ಎಂದು ನನ್ನ ಭಾವನೆ. ಯಾರು ಸಂಬಂಧಪಟ್ಟವರು ಇರುತ್ತಾರೆ ಅವರಿಗೆಲ್ಲ ಗೊತ್ತಾಗಿರುತ್ತದೆ ಅವರು ತಿಳಿದುಕೊಳ್ಳಬೇಕು. ಆದರೆ ನಾವು ಸಭೆಯಲ್ಲಿ ಕೆಲಸಮಾಡತಕ್ಕ ವೇಳೆಯಲ್ಲಿ ಪ್ರತಿಯೊಂದನ್ನು ವಿವರಿಸಿ ಹೇಳಬೇಕಾಗಿಲ್ಲ. ಕೆಲವು ಸೂಕ್ಷ್ಮ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದಾಗ ಅದು ಅವರಿಗೆ ಅರ್ಥವಾಗುತ್ತದೆ. ನನಗೇನು ಸಮಾಧಾನವೂ ಇಲ್ಲ, ಸಂತೋಷವೂ ಇಲ್ಲ. ತಾವೇನು ವಿಚಾರ ಪ್ರಸ್ತಾಪ ಮಾಡಿದ್ದೀರಿ, ತಾವು ವಿರೋಧಪಕ್ಷದ ನಾಯಕರು, ಈಶ್ವರಪ್ಪನವರು ಹೇಳಿರತಕ್ಕದ್ದನ್ನು ಹಾಸ್ಯವಾಗಿ ಅಥವಾ ಲಘುವಾಗಿ ತೆಗೆದುಕೊಳ್ಳತಕ್ಕ ವಿಚಾರವೇನು ಅಲ್ಲ. ಗೆಳೆಯರಾದ ಮಾನ್ಯ ಬೈರೇಗೌಡರು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಪ್ರಯತ್ನಪಟ್ಟರೆ ಹೊರತು ಅದು ಸಮಂಜಸವಾದ ಸಮರ್ಥನೆಯಲ್ಲವೆಂದು ನನ್ನ ಮನಸ್ಸಿಗೆ ಅನಿಸಿದೆ. ಏನೇ ಹೇಳಲಿ ತಮ್ಮದೇ ಆದ ರೀತಿಯಲ್ಲಿ ನಾವೆಲ್ಲರೂ ಒಂದೇ ರೀತಿಯಲ್ಲಿ ಕೆಲಸ ಮಾಡಬೇಕು. ಆದರೆ ಏನು ಮಾಡುವುದು ಇತಿಮಿತಿ ಕೂಡ ಇಲ್ಲ. ನಿನ್ನೆ ಬೈರೇಗೌಡರು ನನ್ನ ಕಛೇರಿಯಲ್ಲಿ ಕುಳಿತಿದ್ದಾಗ ಉಪಾಧ್ಯಕ್ಷರು ಮತ್ತು ನಾನು ಇಬ್ಬರೂ ಪಕ್ಕ ಪಕ್ಕದಲ್ಲೇ ಕುಳಿತಿದ್ದೋ, ಬೆಲ್ ಆಫ್ ಆಯಿತು ಎಂದು ಹೇಳಿ ನಾವಿಬ್ಬರೂ ಇಲ್ಲೇ ಇದ್ದೇವೆಂದು ಹೇಳಿ ಉಪಾಧ್ಯಕ್ಷರು ಎದ್ದು ಓಡುವುದಕ್ಕೆ ಹೋದರು. ಅಂದರೆ ಸದನಕ್ಕೆ ಯಾವರೀತಿಯ ಗೌರವವನ್ನು ಕೊಡಬೇಕು ಎನ್ನತಕ್ಕ ಒಂದು ಮನೋಭಾವನೆ ಅವರಲ್ಲಿ ಹೇಗಿದೆ ಎನ್ನುವುದಕ್ಕೆ ಇದೊಂದು ಉದಾಹರಣೆ ನಾನು ಹೇಳುತ್ತಿದ್ದೇನೆ. ಅವರು ಅನಿವಾರ್ಯ ಸ್ಥಿತಿಯಲ್ಲಿದ್ದರೆ ಡಿಫೆಂಡ್ ಮಾಡುವುದಕ್ಕೆ ಹೇಳಬೇಕು. ಎಲ್ಲರೂ ಕೂಡ ಉಪಾಧ್ಯಕ್ಷರ ನಡತೆ ನೋಡಿ ಕಲಿತುಕೊಳ್ಳಬೇಕು. ಚಿಕ್ಕವರು ಎಲ್ಲರೂ ಸದನದೊಳಗೆ ಬರಲಿಕ್ಕೆ ಅವಕಾಶ ಸಿಕ್ಕಿದೆ, ಇದೊಂದು ದೊಡ್ಡ ಪುಣ್ಯ. ಈ ಮಾತನ್ನು ನಾನು ಅನೇಕ ಸಲ ಹೇಳಿದ್ದೇನೆ. ತಿಳಿದುಕೊಳ್ಳುವುದಿಲ್ಲ ನಮ್ಮ ಸ್ನೇಹಿತರು ನಾನೇನು ಮಾಡುವುದು? ಎಷ್ಟು ಜನರು ಇದ್ದಾರೆ ಕರ್ನಾಟಕ ರಾಜ್ಯದಲ್ಲಿ? ಅವರೆಲ್ಲರೂ ಇಲ್ಲಿ ಒಳಗಡೆ ಬರಲಿಕ್ಕೆ ಆಗುತ್ತದೆಯೇ? ಎಷ್ಟು ಜನರು ಇದ್ದಾರೆ ಕರ್ನಾಟಕ ರಾಜ್ಯದಲ್ಲಿ? ಅವರೆಲ್ಲರೂ ಇಲ್ಲಿ ಒಳಗಡೆ ಬರಲಿಕ್ಕೆ ಆಗುತ್ತದೆಯೆ? ಅಥವಾ ಅರ್ಹತೆ ಕಳೆದುಹೋದಮೇಲೆ ಬರುವುದಕ್ಕೆ ಆಗುತ್ತದೆಯೇ? ಅರ್ಹತೆ ಪಡೆದುಕೊಳ್ಳುವುದಕ್ಕೆ ಎಷ್ಟು ಪ್ರಯತ್ನ ಪಡುತ್ತೇವೆ? ಅದನ್ನು ಉಳಿಸಿಕೊಳ್ಳುವುದಕ್ಕೆ ಎಷ್ಟು ಪ್ರಯತ್ನ ಪಡುತ್ತೇವೆ. ಏಕೆ ಈ ಸ್ಥಿತಿ? ಮನಸ್ಸಿಗೆ ಬಹಳ ಚಿಂತೆಯಾಗುತ್ತದೆ.

## ಪ್ರಸ್ತಾವಗಳು

### ಚುನಾವಣಾ ಪ್ರಸ್ತಾವ

ಶ್ರೀ ಡಿ. ಮಂಜುನಾಥ (ಅರಣ್ಯ ಸಚಿವರು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರ ವಾರ್ತಾ ಮತ್ತು ಪ್ರಚಾರ ಇಲಾಖೆಯ ಮಂತ್ರಿಗಳ ಪರವಾಗಿ

1976ನೆಯ ಇಸವಿಯ ಕರ್ನಾಟಕ ವಿಶ್ವವಿದ್ಯಾನಿಲಯಗಳ ಶಾಸನದ 21(1)(14)ನೇ ಕಲಮಿನ ಮೇರೆಗೆ ಅವಶ್ಯಪಡಿಸಿರುವಂತೆ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ